**CC 2159/2025**

**ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.ಗಳ**
**ನ್ಯಾಯಾಲಯ, ವಿಜಯನಗರ ಜಿಲ್ಲೆ, ಹೊಸಪೇಟೆ.**
**ಸಿಸಿ ನಂಬರ್ 2159/2025**

**ಸಿ ಡಬ್ಲೂ -4**
**ಪಿ ಡಬ್ಲೂ -4**

| | |
|---|---|
| **ಸಾಕ್ಷಿಯ ಹೆಸರು -** | **ಪಂಪಣ್ಣ** |
| **ತಂದೆಯ ಹೆಸರು -** | **ಯಲ್ಲಪ್ಪ** |
| **ವಯಸ್ಸು -** | **53 ವರ್ಷಗಳು** |
| **ಉದ್ಯೋಗ -** | **ಖಾಸಗಿ ಕೆಲಸ** |
| **ವಾಸಸ್ಥಳ -** | **ಹೊಸಪೇಟೆ** |

**ಸಾಕ್ಷಿಯನ್ನು ದಿನಾಂಕಃ 18-03-2026 ರಂದು ಪ್ರಾಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆಃ ಎ. ಪಿ. ಪಿ. ಅವರಿಂದ**

ಈಗ ನಾನು ನೋಡುತ್ತಿರುವ ದಾಖಲೆಯಲ್ಲಿನ ಸಹಿ ನನ್ನದೇ ಆಗಿರುತ್ತದೆ. ಸಾಕ್ಷಿ ಜಪ್ತು ಪಂಚನಾಮೆಯಲ್ಲಿನ ಸಹಿ ನೋಡಿ ಗುರುತಿಸಿರುತ್ತಾರೆ. ಸದರಿ ಪಂಚನಾಮೆಯ ಅಸಲು ಪ್ರತಿ ಗುನ್ನೆ ನಂಬರ್ **197/2024** ರಲ್ಲಿ ಹಾಜರುಪಡಿಸಲಾಗಿದ್ದು, ಈ ಪ್ರಕರಣದಲ್ಲಿ ದೃಡೀಕೃತ ನಕಲನ್ನು ಹಾಜರುಪಡಿಸಲಾಗಿದೆ. ಪಂಚನಾಮೆಯನ್ನು ನಿಪಿಃ **7** ಎಂದು, ಸಾಕ್ಷಿಯ ಸಹಿಯನ್ನು ನಿಪಿಃ **7(ಎ)** ಎಂದು ಗುರುತಿಸಲಾಯಿತು.

ಸದರಿ ಸಹಿಯನ್ನು **2024** ರ **29** ನೇ ತಾರೀಖಿನಂದು ಸಂಜೆ **5.00** ಗಂಟೆಗೆ ಹೊಸಪೇಟೆ ಪಟ್ಟಣ ಪೋಲಿಸ್ ಠಾಣೆಯಲ್ಲಿ ಮಾಡಿದ್ದೆ. ಕಳ್ಳತನ ಆಗಿದ್ದು ಕಳ್ಳರು ಸಿಕ್ಕಿರುವುದರಿಂದ ಪಂಚನಾಮೆ ಮಾಡುವುದು ಇದೆ ಎಂದು ನನ್ನನ್ನು ಮತ್ತು ಚಾಸಾ **-5** ರವರನ್ನು ಪೋಲಿಸರು ಠಾಣೆಗೆ ಕರೆಸಿದ್ದರು. ಠಾಣೆಯಲ್ಲಿ ವಿಷ್ಣು ಮತ್ತು ರಾಹುಲ್ ಎಂಬ ಆರೋಪಿತರು ತಾವು ಕಳ್ಳತನ ಮಾಡಿದ್ದ **30** ಗ್ರಾಂ ಮತ್ತು **10** ಗ್ರಾಂ ತೂಕದ **2** ಬಂಗಾರದ ಚೈನ್‌ಗಳನ್ನು ಹಾಜರುಪಡಿಸಿದ್ದರು. ಸದರಿ ಚೈನ್ ಗಳನ್ನು ಚಾಸಾ **-8** ರವರು ನಮ್ಮ ಮುಂದೆ ತೂಕ ಮಾಡಿದ್ದರು. ಪೋಲಿಸರು

ಸದರಿ ಸರಗಳನ್ನು ಜಪ್ತು ಪಡಿಸಿಕೊಂಡಿದ್ದರು. ಸದರಿ ಸರಗಳನ್ನು ನೋಡಿದರೆ ಗುರುತಿಸುತ್ತೇನೆ.

ಈಗ ನಾನು ನೋಡುತ್ತಿರುವ 2 ಫೋಟೋಗಳಲ್ಲಿನ ವ್ಯಕ್ತಿ ನಾನೇ ಇರುತ್ತೇನೆ. ಸಾಕ್ಷಿ 2 ಫೋಟೋಗಳನ್ನು ನೋಡಿ ಗುರುತಿಸಿದ್ದು, ಸದರಿ ಫೋಟೋಗಳನ್ನು ಒಟ್ಟಾಗಿ ನಿಪಿಃ 8 ಎಂದು ಗುರುತಿಸಲಾಯಿತು.

ನಮಗೆ ವಿಷ್ಣು ಮತ್ತು ರಾಹುಲ್ ಎಂಬ ಆರೋಪಿತರು ಸಣ್ಣ ಶಂಕ್ರಮ್ಮನ ದೇವಸ್ಥಾನದ ಹತ್ತಿರ ಬೆಳಿಗ್ಗೆ 5.30 ಗಂಟೆಗೆ ಒಂದು ಕಳ್ಳತನ ಮಾಡಿದ್ದಾಗಿ ಮತ್ತು ಜಂಬುನಾಥ ರಸ್ತೆಯಲ್ಲಿ ಅಂಗಡಿ ಒಂದರಲ್ಲಿ ಚಕ್ಕಲಿ ಖರೀದಿಸಿದಂತೆ ಮಾಡಿ ಕಳ್ಳತನ ಮಾಡಿದ್ದಾಗಿ ತಿಳಿಸಿದರು. ಪಂಚನಾಮೆಯನ್ನು ಚಾಸಾ -15 ರವರು ತಯಾರಿಸಿರುತ್ತಾರೆ.

ನ್ಯಾಯಾಲಯದ ಮುಂದೆ ಇರುವ 2 ನೇ ಆರೋಪಿ ಮತ್ತು ವಿಡಿಯೋ ಕಾನ್ಫರೆನ್ಸ್ ಮುಲಕ ಹಾಜರಾಗಿರುವ ಆರೋಪಿ ಆ ದಿನ ಠಾಣೆಯಲ್ಲಿ ಇದ್ದರು. ಸಕ್ಷಿ ಆರೋಪಿತರನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲು 1 ನೇ ಆರೋಪಿ ಪರ ಶ್ರೀ ಬಿ.ಎಂ ವಕೀಲರಿಂದಃ**

ಪೋಲಿಸರು ನೋಟಿಸ್ ಕೊಟ್ಟು ನನ್ನನ್ನು ಪಂಚನಾಮೆಗೆ ಕರೆದಿದ್ದರು. ನಾನು ಬಿಡಿಸಿಸಿ ಬ್ಯಾಂಕ್ ಬಳಿ ಇದ್ದಾಗ ಚಾಸಾ -9 ರವರು ಬಂದು ನೋಟಿಸ್ ಜಾರಿ ಮಾಡಿದ್ದರು. ಪಂಚನಾಮೆಯನ್ನು ಬರೆಯಲು ಆರೋಪಿತರೆ ಮಾಹಿತಿ ನೀಡಿದ್ದರು. ಬಂಗಾರದ ಸರಗಳು ಎಷ್ಟು ಉದ್ದ ಇದ್ದವು ಮತ್ತು ಅವುಗಳ ಮೇಲೆ ಎಂತಹ ವಿನ್ಯಾಸ ಇತ್ತು ಎಂದು ನಾನು ನೋಡಿರಲಿಲ್ಲ. ನಿಪಿಃ 8 ರ ಫೋಟೋ ತೆಗೆದಂತಹ ಪೋಲಿಸರ ಹೆಸರು ನನಗೆ ಗೊತ್ತಿಲ್ಲ. ನಿಪಿಃ 8 ರಲ್ಲಿ ಚಾಸಾ -15 ರವರು ಕಂಪ್ಯೂಟರ್ ನಲ್ಲಿ ಟೈಪ್ ಮಾಡುವಂತೆ ಕಾಣಿಸುತ್ತಿಲ್ಲ ಅಂದರೆ ಸರಿ.

ಚಾಸಾ -1 ರವರು ನನಗೆ ಪರಿಚಯ ಇಲ್ಲ. ನನ್ನ ಸಮಕ್ಷಮ ಆರೋಪಿತರು ಯಾವುದೇ ಹೇಳಿಕಗಳನ್ನು ನೀಡಿಲ್ಲ, ಯಾವುದೇ ಸರವನ್ನು ಹಾಜರುಪಡಿಸಿಲ್ಲ ಅಂದರೆ ಸರಿಯಲ್ಲ. ಪೋಲಿಸರು ಯಾವುದೇ ಸರವನ್ನು ಜಪ್ತು ಪಡಿಸಿಕೊಂಡಿಲ್ಲ ಅಂದರೆ ಸರಿಯಲ್ಲ. ಪೋಲಿಸರು ದಾಖಲೆಗಳನ್ನು ಸೃಷ್ಟಿಸಿ ಠಾಣೆಯಲ್ಲಿಯೇ ನನ್ನ ಸಹಿಯನ್ನು ಪಡೆದಿರುತ್ತಾರೆ ಅಂದರೆ ಸರಿಯಲ್ಲ. ನನ್ನ ಸಮಕ್ಷಮ ಯಾವುದೇ ಜಪ್ತು ಪಂಚನಾಮೆ ಆಗಿಲ್ಲ ಅಂದರೆ ಸರಿಯಲ್ಲ. ಪ್ರಕರಣದ ಬಗ್ಗೆ ಮಾಹಿತಿ ಇಲ್ಲದಿದ್ದರೂ ಪೋಲಿಸರ ಮಾತು ಕೇಳಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

**ಪಾಟೀ ಸವಾಲು 2 ನೇ ಆರೋಪಿ ಪರ ಶ್ರೀ ಯು.ಜಿ ವಕೀಲರಿಂದಃ**

ಪಂಚನಾಮೆಯಲ್ಲಿ ವಿಷ್ಣು ಮತ್ತು ರಾಹುಲ್ ಇಬ್ಬರು ಇದ್ದರು ಎಂದು ನಾನು ಹೇಳಿ ಬರೆಸಿರುವುದಿಲ್ಲ. ಸಾಕ್ಷಿ ಮುಂದುವರೆದು ಇಬ್ಬರು ಸ್ಥಳದಲ್ಲಿ ಇದ್ದರು ಎಂದು ನುಡಿಯುತ್ತಾರೆ. 2 ನೇ ಆರೋಪಿ ನಿಪಿಃ 8 ರಲ್ಲಿ ಇರುವುದಿಲ್ಲ ಅಂದರೆ ಸರಿ. ನಾನು ಇದೇ ಮೊದಲ ಬಾರಿಗೆ 2 ನೇ ಆರೋಪಿಯನ್ನು ನೋಡುತ್ತಿದ್ದೇನೆ ಅಂದರೆ ಸರಿ. ಕೃತ್ಯಕ್ಕೂ 2 ನೇ ಆರೋಪಿಗೂ ಯಾವುದೇ ಸಂಬಂಧ ಇಲ್ಲದಿದ್ದರೂ ಪೋಲಿಸರ ಮಾತು ಕೇಳಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ. ನಾನು ಮತ್ತು ಚಾಸಾ -5 ರವರು ಪಂಚನಾಮೆಯನ್ನು ಬರೆಯಲು ಪೋಲಿಸರಿಗೆ ಹೇಳಿಕೆ ನೀಡಿಲ್ಲ. ಪೋಲಿಸರು ಟೈಪ್ ಮಾಡಿದ್ದ ಪಂಚನಾಮೆಗೆ ನಾನು ಸಹಿ ಮಾಡಿರುತ್ತೇನೆ ಅಂದರೆ ಸರಿ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೇ. ಸರಿ ಇದೆ.

ಪ್ರಧಾನ ದಿವಾಣಿ ನ್ಯಾಯಾಧೀಶರು ಹಾಗೂ
ಜೆ.ಎಂ.ಎಫ್.ಸಿ., ವಿಜಯನಗರ ಜಿಲ್ಲೆ, ಹೊಸಪೇಟೆ.